

ಹೊಲುದಲ್ಲಿರುತ್ತಿದ್ದ ಚಕ್ಕಡಿಗಳು, ಎತ್ತುಗಳು ಅಲ್ಲಲ್ಲೇ ಮಲುಗಿದ್ದವು. ಯಾವುತ್ತೂ ನೋಡಿರದ ನೆಲತೋಡುವ ಆ ಮಸೀನುಗಳು ಊರ ಸೀಮೆ ತುಳಿಯುತ್ತಲೇ ಊರ ಬಸುರಿಯರು ಬಿಕ್ಕುವಂತೆ ಭಾಸವಾಗತೊಡುಗಿತ್ತು. ಊರೆಂಬ ಊರೇ ಹುಡಿಹುಡಿಯಾಗುವಂತೆ ಬಂದ ಗಾಡಿಗಳೆಲ್ಲಾ ಗುಡ್ಡ ಏರುತ್ತಲೇ ಊರ ಶಾಲೆಯ ಬಾಲುಮಕ್ಕುಳು ಕವುಕವು ಕಣ್ಣು ಬಿಡುತೊಡುಗಿದ್ದವು.

ಬಂದ ನಾಕಾರು ದಿನುದಲ್ಲಿಯೇ ಊರ ಅರ್ಧದಷ್ಟು ಭೂಮಿ ನುಂಗಿದ್ದ ಆ ಮಸೀನುಗಳು ಬಾವಿ ಸಂಗಮ್ಮಳ ಹೊಲುದಲ್ಲಿ ಬೀಡು ಬಿಟ್ಟು ಸಾಪುಸಾಪಾದ ನೆಲವಗೆಯುತೊಡುಗಿ ಅಲ್ಲಲ್ಲೇ ತಗ್ಗು, ದಿನ್ನೆಗಳು... ರಾಶಿ ಕಲ್ಲುಗಳು... ಮಬ್ಬಾಗಿಸುವ ಹುಡಿ ಮಣ್ಣು... ಏಳುತ್ತಲೇ 'ಲೇ ಹುಡುಗ್ರಾ... ನಿಮ್ಮ ತಾತ ಮುತ್ತಾತ್ರು ಜೀವ ಹಲಹಲ ಮಾಡಿ ಗಳುಸಿದ ಪಡಿ-ಪಾವು ಭೂಮಿನಾ ಕಳ್ಕೋಬ್ಯಾಡ್ರಲೇ. ಅದ್ರ ಬೆಲೆ ನಿಮ್ಗೇನ್ರಲೇ ಗೊತ್ತು. ನಮ್ಗ ಸಾಯೂತನ ಅನ್ನ ನೀಡೂದು ಮಣ್ಣಲೇ... ಮಣ್ಣಿದ್ರ ಯರ್ರೂ ಅಂಜ್ಕಿಲ್ಲ, ಅಳ್ಕಿಲ್ಲ... ಮಣ್ಣ ಕಳ್ಕೊಂಡ್ರ ಮಾನ ಕಳಕೊಂಡಗ್ಗೆ. ಏನಾಯ್ತಲೇ ನಿಮಗೆ... ಮಾತಾಡ್ರಲೇ...' ಎನ್ನುವ ಆರ್ತನಾದವೊಂದು ದುರಗನ ಕಿವಿ ಹೊಕ್ಕಿತ್ತು.

* * *

ಊರು ಜನುರೇ ತಮ್ಮ ಮೂಗಿನ ಮೇಲೆ ಬೆರುಳಾಡಿಸುವಂತೆ ಫಸುಲು ಕೊಡುತ್ತಿದ್ದ ಸಂಗಮ್ಮನ ಹೊಲುದಲ್ಲಿ ಪುಡಿಗಲ್ಲು ಗುಡ್ಡಿ ಬೀಳುತ್ತಲೇ ಇತ್ತ 'ಸಂಗಮ್ನ ಬಾಯಿ ಬಿದ್ದೈತಂತಾ' ಅನ್ನುವ ಸುದ್ದಿಯೊಂದು ಓಣಿ ಸುತ್ತುತ್ತಲೇ ದುರುಗನು ಅವುಳ ಗುಡುಸಲಿನತ್ತ ಓಡಿ ಹೋದನು. 'ಎಪ್ಪಾ ದುರಗಣ್ಣ ನನ್ನ ಹೊಲಾ